Regd. No M. 1299 SATYAVADI[] Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು.)

ಸಂಪುಟ 30 ಸಂಚಿಕೆ 247 | ಬುಧವಾರ 28—5—47 | ಬಿಡಿ ಪ್ರತಿ 3 ಪೈ

ಇಂದಿನ ವರ್ತಮಾನ

ಲಂಡನ್ ಮೇ 27 — ಮಂತ್ರಿ ಮಂಡಲ ನಿಯೋಗದ ಯೋಜನೆಯಂತೆ ಕಾಂಗ್ರೆಸ್ ನಡೆಯಲು ಸಿದ್ಧವೆಂದು ಪಂ|| ನೆಹರು ಮುಸ್ಸೋರಿಯಲ್ಲಿ ನ್ಯೂಸ್ ಕ್ರಾನಿಕಲ್ ಪತ್ರಿಕಾ ಬಾತ್ಮೀದಾರರಿಗೆ ತಿಳಿಸಿರುವರೆಂದು ಹೇಳಲ್ಪಾಗಿದೆ

ಲೇಕ್ ಸಕ್ಸೆಸ್ ಮೇ 26 — ಸಂಯುಕ್ತ ರಾಷ್ಟ್ರ ಜನರಲ್ ಅಸೆಂಬ್ಲಿ ಕಮಿಟಿಗೆ ಭಾರತೀಯರಾದ ಶ್ರೀ ಸೆನ್ನರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ನವದೆಹಲಿ ಮೆ 26 — ಗಾಂಧೀಜಿಯವರು ಇಂದಿನ ಪ್ರಾರ್ಥನಾನಂತರದ ಭಾಷಣದಲ್ಲಿ ಮಂತ್ರಿಮಂಡಲ ಯೋಜನೆಯಂತೆ ಬಿಟಿಷ್ ಭಾರತವನ್ನು ಬಿಡಬೇಕೆಂದು ಒತ್ತಾಯವಾಗಿ ತಿಳಿಸಿದ್ದಾರೆ.

ಮಾರ್‌ಗೇಟ್ ಮೆ 27 — ಲೇಬರ್ ಪಾರ್ಟಿ ಸಮ್ಮೇಳನದಲ್ಲಿ ಅಟ್ಲಿಯವರೂ ಮಾಡಿದ ಭಾಷಣದಲ್ಲಿ ಲೇಬರ್ ಸರಕಾರವು ಭಾರತ ಮತ್ತು ಕಾಲೋನಿಗಳ ಅಗಾಧ ಸಮಸ್ಯೆ ಪರಿಹರಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು ತಮಗೆ ಬೆಂಬಲವಂರ ಮೇಲೆ ಪೂರ್ಣ ನಂಬಿಕೆಯಿದೆಯೆಂದೂ ನುಡಿದರು.

ಕಲ್ಕತ್ತಾ ಮೇ 26 — ಇಲ್ಲಿಗಲಭೆಯಲ್ಲಿ ಒಟ್ಟು ಸತ್ತನು, 11 ಮಂದಿ ಗಾಯಗೊಂಡರು. 45 ಮಂದಿ ದಸ್ತಗಿರಿಯಾಗಿದೆ. ಕೆಲವು ಅಂಗಡಿಗಳನ್ನು ಪೋಲೀಸರು ತೋಧಿಸಿದರು.

ಅಮೃತಸರ ಮೇ 26 — ಕರ್ಫ್ಯೂ ಕಾಲದಲ್ಲಿ 3 ಕಡೆ ಮನೆಗೆ ಬೆಂಕಿ ಹತ್ತಿಸುವುದೂ ಒಂದು ಇರಿತವೂ ನಡೆದಿದೆ. ಸಂಜೆ ಘರ್ಷಣೆಯಾಗಿ 4 ಮಂದಿ ಸತ್ತರು 43 ಮಂದಿ ಗಾಯಗೊಂಡರು.

ರಾಮನಾಡು — ಮುದುಕಲತ್ತೂರು ನಗರದಲ್ಲಿ ಕಾಂಗ್ರೆಸ್ ಬಾವುಟ ತೆಗೆದ-ದರ ಬಗ್ಗೆ ಹಿಂದೂ ಮಹಾಸಭೆಯ-ದೀಕ್ಷಿತರಲ್ಲಿ ಗಲಾಟೆಯಾಗಿ 5 ಮಂದಿ ಹಿಂದೂಗಳ ಮೇಲೆ ಹಾಕಲ್ಪಟ್ಟಿದ್ದ ಮೊಖದ್ದಮೆಯಲ್ಲಿ ಆವರು ಖುಲಾಸೆ ಮಾಡಲ್ಪಟ್ಟರು.

ಕಲ್ಲಿಕೋಟೆ — ಕಳೆದ ಗುರುವಾರ 1000 ಮಂದಿ ಸಿಮಿಗೆ ಕೆಲಸಗಾರರು ತಮ್ಮ ಕಷ್ಟ ಸುಖ ಕುರಿತು ಕಲೆಕ್ಟರವರ ಆಫೀಸಿಗೆ ಬಂದು ಒಂದು ವಿಜ್ಞಾಪನಾ ಪತ್ರಿಕೆ ಒಪ್ಪಿಸಿದರು. ಆವರ ಕಷ್ಟ ಸುಖವನ್ನು ವಿಚಾರಿಸುವುದಾಗಿ ತಿಳಿಸಲಾಯಿತು.

ವರ್ತಮಾನ ಸಂಗ್ರಹ

ಲಾಹೋರ್ ಮೇ 26 — ಕಾಶ್ಮೀರದಲ್ಲಿರುವ ರಾಜಕೀಯ ಖೈದಿಗಳೆಲ್ಲಾ ಕ್ಷೀಪ್ರದಲ್ಲೇ ಬಿಡುಗಡೆಯಾಗುವ ಸಂಭವವಿದೆಯೆಂದು ಶ್ರೀ ಕೃಪಾಲಿನಿಯವರು ತಿಳಿಸಿದ್ದಾರೆ.

ಲಾಹೋರು ಮೇ 26 — ಕಳೆದ ನಾಲ್ಕೈದು ದಿನಗಳಿಂದ ವಾಟಿಯಾಲಾ ಸುತ್ತ ಮುತ್ತ ಗುಡ್ಡ ಪ್ರದೇಶದಲ್ಲಿ ಅಗ್ನಿ ಉತ್ಪಾದನವಾಗಿ ಅದೇ ಇರುವುದನ್ನು ನೋಡಿದರೆ ಪಾಟಿಯಾಲಾ ರಾಜರ ಬೇಸಿಗೆ ರಾಜಧಾನಿ ಚೈಲಾ ಊರೇ ಅಗ್ನಿಯ ಪಾಲಾದೀತೆಂಬ ಶಂಕೆ ಹೆಚ್ಚಿದೆ.

ಅಹಮದಾಬಾದ್ ಮೇ 26 — ರಾಜಕೀಯ ಸ್ವಾತಂತ್ರ್ಯ ಬಂದೊಡನೆ ಕಾಂಗ್ರೆಸ್ಸನ್ನು ರದ್ದು ಗೊಳಿಸಬೇಕಾಗಿಲ್ಲವೆಂದೂ ನಂತರ ಸಾಮಾಜಿಕ ಸ್ವಾತಂತ್ರ್ಯ ಸಾಧಿಸಲು ಕಾಂಗ್ರೆಸ್ ಕೆಲಸ ಮಾಡಬೇಕಾಗಿದೆಯೆಂದೂ ಶಂಕರದೇವರು ಹೇಳಿದ್ದಾರೆ.

ವಿಜಯನಗರ ಮೆ 21 — ಆಂಧ್ರ ದೇಶದ ಸುಸಿದ್ಧ ಶ್ರೀ ಸಿಂಹಾಚಲ ದೇವಾಲಯಕ್ಕೆ ನಿನ್ನೆ ಹರಿಜನ ಪ್ರವೇಶವಾಯಿತು. ವಿಜಯನಗರದ ರಾಜರು 3000 ಹರಿಜನರೊಡನೆ ಈ ಕಾರ್ಯ ನಡೆಸಿದರು.

ಮಾಸ್ಕೋ ಮೇ 26 — ಇನ್ನು ಮುಂದೆ ರಷ್ಯಾದಲ್ಲಿ ಮರಣ ದಂಡನೆ ವಜಾ ಮಾಡಲಾಗಿದೆ ಅದರ ಬದಲು ಅಂತಹ ತಪ್ಪಿಸ್ಥರಿಗೆ 25 ವರ್ಷ ಸಜಾ ವಿಧಿಸಲಾಗುವುದು.

ನವದೆಹಲಿ ಮೇ 26 — ಗಾಂಧೀಜಿಯವರು ಪಾಟ್ನಾದಿಂದ ಹೆಹಲಿಗೆ ಬರುವಾಗ ಅವರಲ್ಲಿ 25 ವರ್ಷಗಳಿಂದಿದ್ದ ಗಡಿಯಾರವು ಕಳೆದು ಹೋಗಿದೆ.

ಧ. ಯ. ಸ ಬುಲೆಟಿನ್

ಪ್ರಚಾರಕ—ರಾಜಾ ಎಸ್ ಗುರುರಾಜಾಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಪಂಢರಪುರದಲ್ಲಿಯೂ ಸತ್ಯಾಗ್ರಹ !

ಶ್ರೀ ಸ್ವಾಮಿ ಕರಪಾತ್ರಜೀಯವರನ್ನು ಒಂಧಿಸಿದ್ದಕ್ಕಾಗಿ ಪಂಢರಾಪುರದಲ್ಲಿ ಅಭೂತಪೂರ್ವ ಸಭೆ ನಡೆಯಿ ಅವರಲ್ಲಿ ಮೊಡ್ಡದೊಡ್ಡ ಪ್ರಮುಖ ವ್ಯಕ್ತಿಗಳು ಮಾತಾಡಿ ಆ ಸ್ವಾಮಿಜಿಯವರನ್ನು ಸರಿಯಾಗಿ ನೋಡಿಕೊಳ್ಳದಿದ್ದಕ್ಕಾಗಿ ಸರಕಾರವನ್ನು ತೀವ್ರವಾಗಿ ಖಂಡಿಸಿ, ಇದೇ ಮನೋಭಾವನೆಯನ್ನು ಮುಂದಕ್ಕೆ ತೋರಿಸಿದಲ್ಲಿ ಸನಾತನಿಗಳು ತಮ್ಮ ಆತ್ಮಶಕ್ತಿಯ ಮಹತ್ವವನ್ನು ತೋರಿ ಸಂಕಾರವನ್ನು ಶೀಘ್ರವಾಗಿ ನಾಶಮಾಡಲು ತಡವಾಗಲಿಕ್ಕಿಲ್ಲವೆಂದೂ, ಪೂಜ್ಯರಲ್ಲಿ ದುರ್ವ್ಯವಹಾರ ಮಾಡಿದ್ದನ್ನು ಕೇಳಿ ಹಿಂದೂಗಳ ರಕ್ತ ಕುದಿಯುತ್ತಿಯೆಂದೂ ಇದೇ ದಬ್ಬಾಳಿಕೆ ಮುಂದವರಿದಲ್ಲಿ ಒಕ್ಕೂಪಾತತ್ಯಾ ನಾವು ಹಿಂಜರಿಯುವುದಿಲ್ಲವೆಂದೂ, ಸತ್ ಅಹಿಂಸೆಗಳ ಹೆಸರಿನಲ್ಲಿ ರಾಕ್ಷಸೀ ಭಾವನೆಯನ್ನೂ ಕೃತ್ಯವನ್ನೂ ತಾಗಿನ ಅನಧಿಕಾರಿ ಸರಕಾರವು ಮಾಡುತ್ತಿರುವುದು ತಕ್ಷಣ ನಿಲ್ಲದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದೂ ಹೇಳಿದರು, ಮತ್ತು ಶ್ರೀ ಸ್ವಾಮಿಜಿಯವರನ್ನು ತಕ್ಷಣ ಬಿಡುಗಡೆ ಮಾಡಿ ಸನಾತನಿಗಳಿಗಾಗಿರುವ ಅನ್ಯಾಯವನ್ನು ತುಂಬಿಕೊಡಬೇಕೆಂದೂ ವೈಸರಾಯಿಯವರಿಗೆ ತಂತೀಕೊಡಲಾಯಿತು.

ಪಂಢರಾಪುರದಲ್ಲಿ
ಹರಿಜನ ಪ್ರವೇಶ ಕೂಡ್ಡದು

ಮೂರುದಿನದ ಮಹಾರಾಷ್ಟ್ರ ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದವರು ಶ್ರೀ ವಾಜ್ಯ ದೇವನಾಯಕಾಚಾರ್ಯ ಶ್ರೀ ಸ್ವಾಮಿ ಗೋ(ಸ್ವಾಮಿ ದೀಕ್ಷೆತಜಿಯವರ ನೇತೃತ್ವದಲ್ಲಿ ಸಭೆ ಸೇರಿ ಪಂಢರಪುರದಲ್ಲಿ ಪಂಚಮ ದೇವಾಲಯ ಪ್ರವೇಶ ಕೂಡದೆಂದೂ ಬಲಾತ್ಕಾರದಿಂದ ಮಾಡಿಸಿದಲ್ಲಿ ಈ ಸಂಘವು ಅನ್ನೆದುರಿಸುತ್ತದೆಯೆಂದೂ ಠರಾವು ಪಾಸು ಮಾಡಿ, ಬ್ರಿಟಿಷ್ ಚಕ್ರವರ್ತಿಗಳಿಗೂ, ಮುಖ್ಯ ಪ್ರಂತ್ರಿ, ವೈಸರಾಯ್, ಪಂ || ದೆಹರು, ಬೊಂಬಾಯಿ ಮುಖ್ಯ ಮಂತ್ರಿಗಳಿಗೂ ತಂತೀಮೂಲ್ಕ ಕಳ್ಸಿಕೂಟ್ಟರು.

ಮಹಾರಾಷ್ಟ್ರ ಕಾಂಗ್ರೆಸ್ ನಾಯಕರಾದ ಶ್ರೀ ಸಾನೇ ಗುರುಜಿಯವರು ಹರಿಜನ ದೇವಾಲಯ ಪ್ರವೇಶಕ್ಕಾಗಿ ಉಪವಾಸ ಕೈಗೊಂಡಿರುವದನ್ನು ಖಂಡಿಸಿ, ಈ ಉಪವಾಸಾಸ್ತ್ರವು ಬ್ರಿಟಿಷರನ್ನು ನಡುಗಿಸಬಲ್ಲುದೇ ವಿನಃ ತಮ್ಮಿಂದಲೇ ಹೊರಬಿದ್ದ ಈ ಅಸ್ತ್ರವು ಸನಾತನಿಗಳ ಮೇಲೇನೂ ಕೆಂದಲಾರದೆಂದೂ ಅವರು ಕೂಡಲೇ ಉಪವಾಸ ನಿಲ್ಲಿಸದಿದ್ದಲ್ಲಿ ಸನಾತನಿಗಳೂ ಉಪವಾಸ ಪ್ರಾರಂಭಿಸುತ್ತಾರೆಂದೂ ಸಾರ್ವಜನಿಕರಿಗೆ ತಿಳಿಸಲಾಯಿತು.

1—5—47 ನೇ ತಾರೀಖಿನಿಂದ ಶ್ರೀ ಕ್ಷೀರೇ ಮಹಾರಾಷ್ಟ್ರರವರು ಸಾನೇ ಗುರುಜೀಯವರ ಉಪವಾಸಕ್ಕೆ ಪ್ರತಿಯಾಗಿ ಪ್ರವೇಶನನ್ನು ವಿರೋಧಿಸಿ ಉಪವಾಸ ವ್ರತವನ್ನು ಪ್ರಾರಂಭ ಮಾಡಿದ್ದಾರೆ.

ಪಂಢರಪುರ ಮೆ 6

ಇಲ್ಲಿಯ ಪಾಂಡುರಂಗ ಮಂದಿರಕ್ಕೆ ಪಂಚಮ ಪ್ರವೇಶವಾಗ ವುದನ್ನು ಸರ್ವ ಪ್ರಯತ್ನದಿಂದ ತಡೆಗಟ್ಟಲು ಶ್ರೀ ಸಂಕೇಶ್ವರ ಪೀಠಾಧೀಶ್ವರಂ, ಪಂ|| ರಾಜಶತಜೇತ್ವರ ಶಾಸ್ತ್ರಿಗಳು, ಶ್ರೀ ಹೆಬ್ಬಾರ ತಾಸ್ತ್ರಿಗಳೇ ಮೊದಲಾದ ಪ್ರಮುಖರು ಇಲ್ಲಿಗೆ ಆಗಮಿಸಿದ್ದಾರೆ.

ಸಂಚಾರ ಹೊಂಟಿದ್ದ ಶ್ರೀ ದೇವನಾಯಕಾಚಾರ್ಯರಿಗೆ ಅಹಮದಾಬಾದಿನಲ್ಲಿ 700 ರೂ. ಗಳು ಮತ್ತು ಸೋಲಾಪುರದಲ್ಲಿ 500 ರೂ ಗಳನ್ನೂ ನಿಧಿಯನ್ನು ಜನರು ಅರ್ಪಿಸಿ ಪಂಢರಪುರದಲ್ಲಿ ನಡೆಯುವ ಧರ್ಮಯುದ್ಧದಲ್ಲಿ ಭಾಗವಹಿಸಲು ಕಂಕಣತೊಟ್ಟಿದ್ದೇವೆಂದು ಪ್ರತಿಜ್ಞೆ ಮಾಡಿರುತ್ತಾರೆ.

ಮಂದಿರ ಪ್ರವೇಶವನ್ನು ವಿರೋಧಿಸಿ ಉಪವಾಸ ಮಾಡುತ್ತಿರುವ ಶ್ರೀ ಕ್ಷೀರೆಯವರ ದೇಹಸ್ಥಿತಿಯನ್ನು ಡಾ|| ಘಡಕೆಯವರು ಪರೀಕ್ಷಿಸಿ, ದೇಹದಲ್ಲಿ ದುರ್ಬಲತೆ ಹೆಚ್ಚಿದೆಯೆಂದೂ, ಆದರೂ ಶ್ರೀ ಕ್ಷೀರೆಯವರು ಹಸನ್ಮುಖಿಗಳಾಗಿದ್ದಾರೆಂದೂತಿಳಿಸಿದ್ದಾರೆ.

ಪಂಡುಪುರ ಮೇ 10

ಶ್ರೀ ಕ್ಷೀರೆಯವರು ಉಪವಾಸ ಪ್ರಾರಂಭಮಾಡಿ ಇಂದಿಗೆ ಹತ್ತು ದಿನಗಳಾದವು ಶ್ರೀಯುತರು ಕುಬಾಬಲಗುಂದಿದವರಾಗಿದ್ದಾರೆ ಇವರನ್ನು ನೋಡಿಕೊಂಡುಹೋಗಲು ಬೊಂಬಾಯಿ, ಪೂನಾ, ಕೊಲ್ಲಾಪುರ, ಸೊಲ್ಲಾಪುರಗಳಿಂದ ಜನರು ಬಂದು ಹೋಗುತ್ತಿದ್ದಾರೆ ಈ ಸಾನೇ ಗುರುಜಿಯವರು ಉಪವಾಸ ಮಾಡಿದ್ದಕ್ಕೆ ಬೊಂಬಾಯಿ ಸರಕಾರದವರು ಕೊಡದೆಂದು ಪ್ರಾರ್ಥಿಸಿದರು. ಶ್ರೀ ಕ್ಷೀರೆಯವರು ಉಪವಾಸ ಮಾಡಿದರೆ ಲಕ್ಷಿಸಿಲ್ಲ. ಇದು ಸರ್ಕಾರದ ಅನೀತಿ ಸ್ವಾರ್ಥತೆ, ಸ್ವಪ್ರತಿಷ್ಠೆ, ದ್ವೇಷಗಳನ್ನು ತೋರಿಸಿದೆ. ಸರ್ಕಾರದ ಈ ಪಕ್ಷಪಾತಕ್ಕೆ ಶೀಘ್ರದಲ್ಲಿಯೇ ತಕ್ಕ ಶಾಸ್ತಿಯಾಗುವುದರಲ್ಲಿ ಸಂದೇಹವಿಲ್ಲ. ಸಾನೆಯವರ ಉಪವಾಸ ವಿಷಯವನ್ನು ಪತ್ರಿಕೆಗಳು ದೊಡ್ಡ ದೊಡ್ಡ ಆಕ್ಷರಗಳಲ್ಲಿ ಪ್ರಕಟಿಸಿವೆ. ಶ್ರೀ ಕ್ಷೀರೆಯವರ ವಿಚಾರವನ್ನು ಮಾತ್ರ ಸಣ್ಣ ಅಕ್ಷರದಲ್ಲೂ ಪ್ರಕಟಿಸುವ ಸದ್ಭಾವನೆಯನ್ನು ತೋರಲಿಲ್ಲ. ಇದು ಪತ್ರಿಕಾರಂಗದ ಧ್ಯೇಯಕ್ಕೇ ಅವಮಾನ ತಂದ ವಿಷಯವಾಗಿದೆ

ಪತ್ರಿಕೆಗಳಲ್ಲಿಯೂ ಪಕ್ಷಪಾತವೇ ?

ನಮ್ಮ ಕನ್ನಡ ನಾಡಿನಲ್ಲಿರುವ ಪ್ರಮುಖ ಪತ್ರಿಕೆಗಳೂ ಕೂಡ ಕಾಂಗ್ರೆಸ್ಸಿನ ಸನ್ನಾಚಾರಗಳನ್ನು ದಪ್ಪ ಅಕ್ಷರದಲ್ಲಿ ಪ್ರಕಟಿಸುತ್ತೀವೆ. ಸಂತೋಷ. ಆದರೆ ಸನಾತನಿಗಳ ಚಟುವಟಿಕೆ ಕಾರ್ಯಕ್ರಮಗಳನ್ನು ಮಾತ್ರ ಎಷ್ಟು ಸಲ ಕಳಿಸಿದರೂ ಪ್ರಕಟಿಸುವುದಿಲ್ಲ ! ಇದು ಯಾವ ನ್ಯಾಯ. ಪತ್ರಿಕೆಗಳಿರುವುದು ದೇಶದಲ್ಲಿ ನಡೆಯುವ ಘಟನೆ ಸನ್ನಾಚಾರಗಳನ್ನು ಜನತೆಗೆ ತಿಳಿಸುವ ಸಲುವಾಗಿ. ಇದೇ ನಿಜವಾದ ಪತ್ರಿಕಾಧ್ಯೇಯ. ಪತ್ರಿಕೆಗೆ ಪಕ್ಷಪಾತ ದ್ವೇಷಗಳು ಇರಕೂಡದು. ಆದರೆ ನಮ್ಮ ಕನ್ನಡ ನಾಡಿನ ಪತ್ರಿಕೆಗಳು ಹೆಸರುಸಿಂದ ದೊಡ್ಡದಾಗಿದ್ದರೂ ಕಾರ್ಯದಲ್ಲಿ ಬಹು ಅಲ್ಪತನ ತೋರುತ್ತಿವೆ. ಸನಾತನಿಗಳ ಮೇಲೆ ಈ ಪತ್ರಿಕೆಗಳಿಗೇಕಿಷ್ಟು ಕ್ರೋಧ? ಈ ರೀತಿ ಯಾದ ಅನ್ಯಾಯಗಳನ್ನೂ ಪತ್ರಿಕಾಕರ್ತರು ಇನ್ನು ಮುಂದಾದರೂ ನಿಲ್ಲಿಸಲಿ. ಇಲ್ಲದಿದ್ದರೆ ಪತ್ರಿಕೆಗಳೆಂದರೆ ಸುಳ್ಳಿನ, ಅನ್ಯಾಯದ ಪಕ್ಷಪಾತದವುಗಳೆಂಬ ಕೆಟ್ಟ ಹೆಸರು ಆನು ಹೊತಲು ಸಿದ್ದರಾಗಲಿ ? ನಮ್ಮ ಕನ್ನಡ ನಾಡಿನ ಪತ್ರಿಕಾ ಕರ್ತಾರಾದ ಬಂಧುಗಳು ನಮ್ಮ ಈ ಸಲಹೆಯನ್ನು ಸ್ವೀಕರಿಸುತ್ತಾರೆಂದು ನಂಬಿದ್ದೇವೆ.

(ಮುಂದುವರಿಯುವುದು)

ಮೈಸೂರು ಸಿಟಿ ರೇಷನಿಂಗ್

No. R 6 - 81 / 46-47

1947 ನೇ ಇಸವಿ ಮೇ ತಾಹೆ 31 ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ

(ಸಹಿ) ಅಬ್ದುಲ ರಜಾಕ್
ರೇಷನಿಂಗ್ ಆಫೀಸರ್
21-5-47 ಮೈಸೂರು ಸಿಟಿ

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ|| **25-5-47** ರಿಂದ ಕಿಕ್ಕಿರಿದ ನೇ **4** ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು

ಸ ತ್ಯ ವಾ ದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪಂಸ್ಥಳಕ್ಕೆ ಅಂಚೆವೆಚ್ಚಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agrahar, Mysore.

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕಾದ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp.et, MYSORE.

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

At Opera

6 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ, ರಾಮುಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತಮಿಳು)



ಚಿತ್ರದಲ್ಲಿ ಬರುವ ಚಿತ್ರಾಲಯ ಸ್ಟುಡಿಯೋ